KATK010000522024

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.5/2024</u>**

ಪ್ರಾ.ಸಾ. ಃ **1**

ದೋ.ಸಾ. ಃ **1**

ದಿ.**09.02.2026**

| | |
|---|---|
| ಹೆಸರು | ಃ ಗಂಗಾಧರ |
| ತಂದೆಯ ಹೆಸರು | ಃ ವೆಂಕಟಪ್ಪ |
| ವಯಸ್ಸು | ಃ **42** ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸಸ್ಥಳ | ಃ ಮಲ್ಲಾಘಟ್ಟ |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ಚಾ ಸಾ 6 ಮಂಗಳಗೌರಮ್ಮ ನನ್ನ ತಂಗಿ. ಚಾ ಸಾ 7 ದರ್ಶನ್ ಮತ್ತು ಚಾ ಸಾ 8 ಸೃಜನ್ ನನ್ನ ತಂಗಿಯ ಮಕ್ಕಳು. ಆರೋಪಿ ಗೊತ್ತಿದೆ.
2. ದಿ.01.10.2023 ರಂದು ಸಂಜೆ 6.30 ಗಂಟೆಗೆ ಮಲ್ಲಾಘಟ್ಟದಲ್ಲಿರುವ ಎಸ್.ಕೆ.ಎನ್. ಬಾರ್ ಅಂಡ್ ರೆಸ್ಟೋರೆಂಟ್ ಗೆ ಮದ್ಯಪಾನ ಮಾಡಲು ಹೋಗಿದ್ದೆನು. ಆ ಸಮಯದಲ್ಲಿ ನನ್ನ ಪರಿಚಯಸ್ಥರಾದ ಚಾ ಸಾ 2 ನಾಗರಾಜು ಅಲಿಯಾಸ್ ಬೇಗೂರು ನಾಗ ಮತ್ತು ಚಾ ಸಾ 3 ರಂಗಸ್ವಾಮಿ ಅಲಿಯಾಸ್ ಕುಣಿಗಲ್ ಕೋಟೆ ಬೆಲ್ಲ ಇದ್ದರು. ಆರೋಪಿ ಬಂದು ನನ್ನ ಮುಂದೆಯೇ ಮದ್ಯಪಾನ ಮಾಡುತ್ತೀಯಲ್ಲಾ, ನಾವು ರೌಡಿಗಳು, ನಿನ್ನ ಅಮ್ಮನ್ನಾಕ್ಯಾಯ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡಬೇಕೆನ್ನುವ ಉದ್ದೇಶದಿಂದ ನಿನ್ನನ್ನು ಇವತ್ತು ಕೊಲೇ ಮಾಡುವುದೇ ಎಂದು ಹೇಳಿ ರಾಡ್ ನಿಂದ ತಲೆಗೆ ಹೊಡೆದನು. 4-5 ಏಟು ಹೊಡೆದನು. ಬಾರ್ ನ ಹುಡುಗರು, ನನ್ನ ತಂಗಿ, ತಂಗಿಯ ಮಕ್ಕಳು ಬಂದು ಜಗಳ ಬಿಡಿಸಿದರು. ಇವತ್ತು ತಪ್ಪಿಸಿಕೊಂಡಿದ್ದೀಯಾ, ಇನ್ನೊಂದು ಬಾರಿ

ಕತ್ತರಿಸಿ ಹಾಕುತ್ತೇನೆಂದು ಆರೋಪಿ ಹೇಳಿದನು. ನನ್ನನ್ನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ನಾನು ಕುಣಿಗಲ್ ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಬಂದರು. ಅಲ್ಲಿ ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡರು. ಆ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ನಾನು ಹೇಳಿಕೆ ಕೊಡುವಾಗ ಪೋಲೀಸರು ಕೇಳಿದ ಪ್ರಶ್ನೆಗಳು ನನಗೆ ಅರ್ಥವಾಗುತ್ತಿತ್ತು. ಆರೋಪಿ ಜಿದ್ದಿನಿಂದ ಕೊಲೆ ಮಾಡಲು ಪ್ರಯತ್ನಪಟ್ಟನು.

3. ನಮ್ಮ ಊರಿನಲ್ಲಿ ಗಣೇಶನ ಉತ್ಸವದಲ್ಲಿ ನಾನು ಮತ್ತು ಆರೋಪಿ ಡ್ಯಾನ್ಸ್ ಮಾಡುತ್ತಿದ್ದೆವು. ಆವಾಗಲೂ ಮದ್ಯಪಾನ ಮಾಡಿದ್ದೆವು. ಕುಣಿಗಲ್ ಆಸ್ಪತ್ರೆಗೆ ಹೋದಾಗ ಇಲ್ಲಿ ಆಗುವುದಿಲ್ಲವೆಂದು ಹೇಳಿದ್ದಕ್ಕೆ ನನ್ನನ್ನು ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡುಹೋದರು. ನನಗೆ ಗಾಯವಾಗಿ ರಕ್ತ ಬಂದಿತ್ತು. ಅದು ನನ್ನ ಬಟ್ಟೆಗೆ ಬಿದ್ದಿತ್ತು. ಆಸ್ಪತ್ರೆಯಲ್ಲಿ ನನ್ನ ಬಟ್ಟೆ ತೆಗೆದರು, ಆ ಬಟ್ಟೆ ಎಲ್ಲಿ ಹೋಯಿತು ಎಂದು ನನಗೆ ಗೊತ್ತಿಲ್ಲ. ಇದರ ಬಗ್ಗೆ ನಾನು ಪೋಲೀಸರಿಗೆ ಮರುಹೇಳಿಕೆ ಕೊಟ್ಟಿದ್ದೇನೆ. ಆ ದಿನ ನನಗೆ ಹೊಡೆಯಲು ಉಪಯೋಗಿಸಿದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸೀಲ್ ಮಾಡಲಾದ ಬಿಳಿ ಬಟ್ಟೆಯ ಚೀಲವನ್ನು ತೆರೆದು ಅದರೊಳಗಿರುವ ರಾಡನ್ನು ತೋರಿಸಲಾಗಿ ಸಾಕ್ಷಿ ಗುರುತಿಸಿದ್ದರಿಂದ ರಾಡನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಪವನ್ ಕುಮಾರ್ ಎಸ್.ವಕೀಲರಿಂದ ಆರೋಪಿತನ ಪರವಾಗಿ :**

4. ನಾನು ಐದನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಚಾ ಸಾ 2 ನಾಗರಾಜು ಮತ್ತು ಚಾ ಸಾ 3 ರಂಗಸ್ವಾಮಿ ನನ್ನ ಆತ್ಮೀಯ ಸ್ನೇಹಿತರು ಎಂದರೆ ನಿಜ. ಚಾ ಸಾ 3 ರಂಗಸ್ವಾಮಿ ಮೃತಪಟ್ಟಿದ್ದಾರೆ. ಚಾ ಸಾ 4 ಪ್ರಭುಸ್ವಾಮಿ ಬಾರ್ ನ ಕ್ಯಾಷಿಯರ್. ನಾನು ಎಸ್.ಕೆ.ಎನ್ ಬಾರ್ ಗೆ ಮದ್ಯಪಾನ ಮಾಡಲು ಹೋಗುತ್ತೇನೆ. ಎಸ್ ಕೆ ಎನ್ ಬಾರ್ ನಲ್ಲಿ ಜನ ತುಂಬಿರುತ್ತಾರೆ. ನಾನು ಮದ್ಯಪಾನ ಮಾಡುತ್ತಿದ್ದ ಟೇಬಲ್ ಪಕ್ಕದ ಚೇರ್ ನಲ್ಲಿ 3 ಜನ ಕುಳಿತಿದ್ದೆವು. ಆರೋಪಿ 2-3 ಟೇಬಲ್ ಬಿಟ್ಟು ಕುಳಿತಿದ್ದನು. ಎಸ್.ಕೆ.ಎನ್. ಬಾರ್ ನಿಂದ ನನ್ನ ಮನೆಗೆ 2 ಕಿ ಮೀ ದೂರ. ನನ್ನ ತಂಗಿ ಮಂಗಳಗೌರಮ್ಮ ಬೆಂಗಳೂರಿನಲ್ಲಿ

ವಾಸವಿದ್ದಾಳೆ. ಚಾ ಸಾ 8 ಸೃಜನ್ ಬೆಂಗಳೂರಿನಲ್ಲಿ ವಾಸವಿದ್ದಾನೆ. ಚಾ ಸಾ 5 ಶೈಲೇಶ್ ನನ್ನ ತಂಗಿಯ ಮಗನಲ್ಲ. ಆ ಬಾರ್ ನಲ್ಲಿ ಒಟ್ಟು 8 ಜನ ಇದ್ದೆವು. ಆ ಬಾರ್ ನಲ್ಲಿ ಸಪ್ಲೈಯರ್ 8 ಜನ ಇದ್ದಾರೆ ಎಂದರೆ 8 ಜನಕ್ಕೂ ಮೇಲ್ಪಟ್ಟು ಇದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಮದ್ಯಪಾನ ಮಾಡಲು ಎಸ್ ಕೆ ಎನ್ ಬಾರ್ ಗೆ ಹೋಗಿ ಮದ್ಯಪಾನ ತೆಗೆದುಕೊಳ್ಳುವ ಮೊದಲೇ ಗಲಾಟೆಯಾಯಿತು. ಪೋಲೀಸರು ಎಸ್ ಕೆ ಎನ್ ಬಾರ್ ಗೆ ಜೀಪ್ ನಲ್ಲಿ ಬಂದರು. ಪೋಲೀಸರು ಬಂದು ಗಲಾಟೆಯನ್ನು ಬಿಡಿಸಿ ನನ್ನನ್ನು ಆಟೋದಲ್ಲಿ ಹಾಕಿ ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಗೆ ಹೋದಾಗ ನನಗೆ ಜ್ಞಾನ ಇರಲಿಲ್ಲ. ಆಸ್ಪತ್ರೆಯಲ್ಲಿ 4 ದಿವಸಗಳ ನಂತರ ಜ್ಞಾನ ಬಂದಿತು. ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಯಾವ ವೈದ್ಯರು ಚಿಕಿತ್ಸೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ಆದಿಚುಂಚನಗಿರಿ ಆಸ್ಪತ್ರೆಯಲ್ಲಿ 15 ದಿವಸ ಇದ್ದೆನು.

5. ನಾನು ಆಟೋ ಓಡಿಸುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮೊಬೈಲ್ ಅಂಗಡಿಯ ಎದುರು ನಾನು ಆಟೋ ನಿಲ್ಲಿಸುತ್ತಿದ್ದು, ನನಗೂ ಆರೋಪಿಗೂ ಜಗಳವಾಗಿ ಆ ದ್ವೇಷದಿಂದ ಈ ಸುಳ್ಳು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಗೂ ಆರೋಪಿಯ ಮನೆಗೂ 2 ಕಿ ಮೀ ಅಂತರ. ನಾನು ಎಸ್ ಕೆ ಎನ್ ಬಾರ್ ನಲ್ಲಿ ಮದ್ಯಪಾನ ಮಾಡಿ ಹಲವಾರು ಮಂದಿಗೆ ಹೊಡೆದು ನನ್ನ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಆ ದಿನ ನನಗೆ ಹೊಡೆಯಲು ಉಪಯೋಗಿಸಿದ ರಾಡ್ ಎಷ್ಟು ಉದ್ದ, ಎಷ್ಟು ದಪ್ಪ ಇತ್ತು ಎಂದರೆ ನನಗೆ ಏಟಾಗಿದ್ದರಿಂದ ಅಳತೆ ಮಾಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ನನಗೆ ಹೊಡೆದಿಲ್ಲ, ನಾನೇ ರಾಡನ್ನು ಸೃಷ್ಟಿ ಮಾಡಿ ಪೋಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವಂತಹ ರಾಡ್ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು